ಗೊತ್ತಾಯ್ತು ಬಿಡಿ' ಎಂದು ಮಾತಾಡುತ್ತಲೇ ಇದ್ದರು.

ನಮ್ಮ ಕಣ್ಣು ನೋಡಲಾಗದ ಇಂತಹ ಸಾವಿರಾರು ವಿಸ್ಮಯದ ಕಥೆಗಳು ಈ ಮಾಯಾ ನಿಸರ್ಗದಲ್ಲಿ ಪ್ರತಿಕ್ಷಣವೂ ನಡೆಯುತ್ತಲೇ ಇರುತ್ತವೆ. ತೀಕ್ಷ್ಣ ಕಣ್ಣು, ಸೂಕ್ಷ್ಮ ಮನಸ್ಸಿದ್ದರೆ ನೋಡಬಲ್ಲ ಅವಕಾಶ ಎಲ್ಲರಿಗೂ ಇದೆ. ಲಾಭದ ದೃಷ್ಟಿಯಿಂದ ಜಗವ ನೋಡುವ ಅನೇಕರಿಗೆ ಇದೊಂದು ನಿರುಪಯುಕ್ತ ಕ್ರಿಯೆ ಎನ್ನಿಸಬಹುದು. ಮನಸ್ಸಿಗೆ ಉಲ್ಲಾಸ, ಮತ್ತು ಜೀವನ ಪ್ರೀತಿ ಉಣಿಸುವ ಶಕ್ತಿ ಈ ಭೂಮಿಯಲ್ಲಿದೆ. ಒಂದು ಹೂ, ಚಿಗುರೆಲೆ, ಬಳ್ಳಿ, ಚಿಟ್ಟೆ, ಹಕ್ಕಿ ಕೂಗು, ಹನಿ ನೀರು ಕೂಡ ಗಮನಿಸಿದರೆ ವಿಶಿಷ್ಟ ಅನುಭವ ನೀಡಬಲ್ಲವು. ಈ ನಿಸರ್ಗದ ಚಮತ್ಕಾರಗಳನ್ನು ಗಮನಿಸುವ ತಾಳ್ಮೆ, ಗುರುತಿಸುವ ಆಸಕ್ತಿ, ತಿಳಿಯುವ ಹುಚ್ಚುತನ ಇರಬೇಕಷ್ಟೆ.

ನಮ್ಮ ತೀರ್ಥಹಳ್ಳಿ ವಿನಯ ನಂತರದಲ್ಲಿ ನಾ ಕಂಡ ಮತ್ತೊಬ್ಬ ಹುಟ್ಟಾ ನ್ಯಾಚುರಲಿಸ್ಟ್ ಎಂದರೆ ಅದು ನಮ್ಮ ಶಿಡೇನೂರ ಚಂದ್ರು. ಈತ ಕೂಡ ಪಕ್ಕಾ ಹಳ್ಳಿ ಹೈದ. ಬಯಲುಸೀಮೆಯಲ್ಲಿ ಗೂಡು ಕಟ್ಟುವ, ಮೊಟ್ಟೆ ಇಟ್ಟು ಮರಿ ಮಾಡುವ, ಹಕ್ಕಿಗಳ ಜಾಗಗಳನ್ನು ನಾಜೂಕಾಗಿ ಗುರುತಿಸುವ ಚಾಣಾಕ್ಷ. ಏನಾದರೂ ಗೂಡು ಸಿಕ್ಕಿತ್ತೇನೋ ? ಎಂದು ಚಂದ್ರುಗೆ ಕೇಳುತ್ತಲೇ ಇದ್ದೆ. ಅವನು ನೋಡ್ತಾ ಇದೀನಿ ಇರಿ ಸರ್ ಎಂದು ಗೊಣಗುತ್ತಲೇ ಇದ್ದ. ಮಿಂಚುಳ್ಳಿಗಳು ಮಣ್ಣಿನ ದಿಬ್ಬ ಇಲ್ಲವೇ ನೀರು ನಿಂತ ಜಾಗದ ಮೇಲ್ಭಾಗದ ಕೆಸರಿನಲ್ಲಿ ಆಳವಾದ ಬಿಲ ಕೊರೆದು ಗೂಡು ಮಾಡುತ್ತವೆ, ಇದನ್ನೆಲ್ಲಾ ಹುಡುಕುವವರಿಗೆ ಸಾಕಷ್ಟು ಅನುಭವ ಇರಬೇಕು. ನೀರಿನ ಮೇಲೆ ಬಂದು ಮೀನು ಕಚ್ಚಿಕೊಂಡು ಮಿಂಚುಳ್ಳಿಯೊಂದು ಹಾರಿ ಹೋದರೆ ಅದನ್ನು ಹಿಂಬಾಲಿಸಿಕೊಂಡು ಓಡಬೇಕು. ಎರಡು ಮೂರು ದಿನ ನಿರಂತರವಾಗಿ ಅದರ ಓಡಾಟವನ್ನು ಗಮನಿಸಬೇಕು. ಆಗ ಮಾತ್ರ ಅದರ ನಿಖರವಾದ ಗೂಡು ಪತ್ತೆ ಹಚ್ಚಬಹುದು.

ಗೂಡು ಪತ್ತೆ ಹಚ್ಚಿದ ಚಂದ್ರು 'ಬೇಗ ಬನ್ನಿ ಸರ್' ಎಂದ. ತಕ್ಷಣ ಹೊರಡೋಣ ಎಂದರೆ ಆಗಲಿಲ್ಲ. ಅವನು ಹೇಳಿ ಐದಾರು ದಿನಗಳೇ ಆಗಿ ಹೋಗಿದ್ದವು. ಇನ್ನು ನೀವು ಬೇಗ ಬರದಿದ್ದರೆ ಈ ಪಕ್ಷಿ ತನ್ನ ಮರಿಗಳನ್ನು ಕರೆದುಕೊಂಡು ಹಾರುತ್ತದೆ ಎಂದು



ಹೆದರಿಸಿದ. ಈ ಚಾನ್ಸ್ ಮಿಸ್ ಮಾಡಲೇಬಾರದೆಂದು ಮುದುಡಿ ಮೂಲೆಯಲ್ಲಿ ಕೂತಿದ್ದ ಕ್ಯಾಮೆರಾ ಎತ್ತಿಕೊಂಡು ಹೊರಟೆ. ಜೊತೆಗೆ ಗೆಳೆಯ ವೀರೇಶ ಇದ್ದ. ಇವನಿಗೂ ಕ್ಯಾಮೆರಾ ಷೋಕಿ ಹಚ್ಚಿ ಹಾಳು ಮಾಡಿದ್ದೇನೆ. ನಾವೀಗ ಬ್ಯಾಡಗಿ ಸಮೀಪದ ಕೆರೆಯ ಬಳಿ ಹೋಗಿ ನಿಲ್ಲಬೇಕಿತ್ತು. ಬೆಳಗ್ಗೆ ಬೇಗ ಬಂದು ಬಿಡಿ ಎಂದು ಚಂದ್ರು ಹೇಳಿದ್ದ. ತಾವರೆ ಮೊಗ್ಗಿನ ಮೇಲೆ ಮಿಂಚುಳ್ಳಿ ಬಂದು ಕೂರುವ ಸಂದರ್ಭ ಸಿಗುವುದೇ ಅಪರೂಪ. ಬಹಳ ವರ್ಷದಿಂದ ಇಂತದ್ದೊಂದು ಅವಕಾಶಕ್ಕಾಗಿ ಕಾಯುತ್ತಿದ್ದೆ.

ತನ್ನ ಮರಿಗಳಿಗಾಗಿ ಕಾಮನ್ ಕಿಂಗ್ ಫಿಶರ್ ಆಯಾಸದಿಂದ ಮೀನು ಹಿಡಿದು ತರುತ್ತಿತ್ತು. ಓಡಿಬಂದು ತಾವರೆ ಮೊಗ್ಗಿನ ಮೇಲೆ ತನ್ನ ಚೂಪಾದ ಬೆರಳು ಬಳಸಿ ಕೂರುತ್ತಿತ್ತು. ಬೆಳಗ್ಗೆ ನಾಲ್ಕು ಗಂಟೆಗೆ ಎದ್ದು ಶಿವಮೊಗ್ಗದಿಂದ ಕಾರಿನಲ್ಲಿ ಹೊರಟ ನಾನು ರಾತ್ರಿ ನಿದ್ದೆ ಕೂಡ ನೆಟ್ಟಗೆ ಮಾಡಿರಲಿಲ್ಲ. ಕಾರಣ ಈ ದೃಶ್ಯವನ್ನು ಸೆರೆ ಹಿಡಿಯುವ ಆಸೆ. ಹೀಗೆ ಮನಸ್ಸು ಆಸೆಯ ಪಡುವ ಪಟ ತೆಗೆಯಲು ನೂರಾರು ಕಿಲೋಮೀಟರ್ ಪ್ರಯಾಣ ಮಾಡುವ ನನಗೆ ಅಂದುಕೊಂಡ ಪಕ್ಷಿಯ ಚಿತ್ರ ತೆಗೆಯುವ ತನಕ ನೆಮ್ಮದಿಯೇ ಇರುವುದಿಲ್ಲ. ಮರೆಯಲ್ಲಿ ಕಾದಿದ್ದು ಕೆಸರಲ್ಲಿ ಜಾರಿ ಬಿದ್ದ ನಮ್ಮೆಲ್ಲಾ ತೊಂದರೆ ಮರೆಯುವಂತೆ ಮಿಂಚುಳ್ಳಿ ದಂಪತಿಗಳು ಪೋಸು ಕೊಟ್ಟವು. ತಮ್ಮ ಮಕ್ಕಳ ಸಾಕಲು ಈ ಹಕ್ಕಿಗಳು ಪಡುವ ಹಂಬಲ, ಚಡಪಡಿಕೆ, ಶ್ರಮ, ಸಂಕಟ, ಎಲ್ಲವೂ ಮನಸ್ಸಿನಾಳಕ್ಕೆ ಇಳಿದು ಹೋದವು. ●